# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ಜಾಣ ಪರೀಕ್ಷೆ – ೨೦೧೪

**ಪ್ರಶ್ನೆಪತ್ರಿಕೆ – ೧**

## ನಡುಗನ್ನಡ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**೧. ಒಂದರ ಭಾವವನ್ನು ವಿವರಿಸಿ.** ೧೦

ಅ) ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಮನವೇ ಬೀಜ!
ಎನಗುಳ್ಳುದೊಂದು ಮನ
ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ
ಎನಗೆ ಭವವುಂಟೆ? ಚನ್ನಮಲ್ಲಿಕಾರ್ಜುನಯ್ಯ

ಆ) ಪುಂಡತನವ ಮಾಡಲು ನಾನು ದೊಡ್ಡ
ಗಂಡಸೇನೆ ಹೇಳಮ್ಮಯ್ಯ? ಎನ್ನ
ಕಂಡವರು ದೂರುತಾರೆ ಗೋಪಮ್ಮ ನಾ ನಿನ್ನ
ಕಂದನಲ್ಲವೇನೆ ಅಮ್ಮಯ್ಯ

**೨. ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಸಂದರ್ಭೋಚಿತವಾಗಿ ವಿವರಿಸಿ:** ೨೦

ಅ) ಕುಳ್ಳಿರೆಂದರೆ ನೆಲ ಕುಳಿ ಹೋಹುದೆ?
ಆ) ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ.
ಇ) ನಾಲಗೆ ನಿನ್ನ ಕೊಂಡಾಡಲಿ.
ಈ) ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು.
ಉ) ಸರ್ರನೆ ಹೋಗವ್ವಾ ಭರ್ರನೆ ಬಾರವ್ವಾ.
ಊ) ಮುಳ್ಳುಗಳ ಮೇಲೆ ನೀ ಒರಗಿ ಸಾಯಪ್ಪ.

**೩. ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೨೦

೧) ಜೇಡರ ದಾಸಿಮಯ್ಯ ೨) ವಚನ ೩) ಭಾಗೀರತಿ
೪) ಜಂಗಮ ೫) ಕನಕದಾಸ ೬) ಶಿಶುನಾಳ ಶರೀಫ

(ಪು.ತಿ.ನೋ.)



**೪. ಕೆಳಗಿನವುಗಳಲ್ಲಿ ಐದು ಪದಗಳಿಗೆ ಅರ್ಥ ಬರೆಯಿರಿ.** ೦೫

೧) ಕುನ್ನಿ ೨) ಭವ ೩) ಚರಣ ೪) ದಂಡಿಗೆ
೫) ಅನುಜ ೬) ತನು ೭) ಹಮ್ಮು ೮) ಕೂರ್ದಸಿ
೯) ಸೊರಣೆ ೧೦) ಸಕನ

**೫. ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ.** ೩೦

ಅ) ಮಾಯೆಯ ಬಗೆಗೆ ಅಕ್ಕಮಹಾದೇವಿಯವರ ನಿಲುವುಗಳೇನು?
ಆ) ಕುಲದ ಬಗೆಗೆ ಕನಕದಾಸರ ಅಭಿಪ್ರಾಯಗಳೇನು?
ಇ) ಅನುಭಾವದಡಿಗೆಯ ಮೂಲಕ ಮೋಕ್ಷವನ್ನು ಸಂಪಾದಿಸಬಹುದಾದ ಮಾರ್ಗ ಯಾವುದು?
ಈ) ಮಗುವಿನ ಬಗೆಗೆ ತಾಯಿಯ ವಾತ್ಸಲ್ಯವು ಎಂಥದು?
ಉ) ಭಾಗೀರತಿಯ ಅಸಹಾಯಕ ಸ್ಥಿತಿಯು ಕೆರೆಗೆ ಹಾರ ಪದ್ಯದಲ್ಲಿ ಹೇಗೆ ಚಿತ್ರಿತವಾಗಿದೆ?

**೬. ಒಂದು ಪ್ರಶ್ನೆಗೆ ವಿಮರ್ಶಾತ್ಮಕವಾಗಿ ಉತ್ತರಿಸಿ.** ೧೫

ಅ) ಜೇಡರ ದಾಸಿಮಯ್ಯನ ವಚನಗಳಲ್ಲಿ ಕಂಡುಬರುವ ವಿಶೇಷತೆಯೇನು? ಪರಿಚಯ ಮಾಡಿಕೊಡಿ.
ಆ) ಸರ್ವಜ್ಞನ ವಚನಗಳು ಇಂದಿಗೂ ಪ್ರಸ್ತುತವೆ? ಹೇಗೆ? ವಿಚಾರ ಮಾಡಿ.
ಇ) 'ಭೀಷ್ಮರಿಗೆ ಓತಿ ಕೊಟ್ಟ ಶಾಪ' – ಈ ಕಾವ್ಯಭಾಗವನ್ನು ನಿಮ್ಮ ವಾಕ್ಯದಲ್ಲಿ ಸಂಗ್ರಹಿಸಿ ಕಥಾರೂಪಕ್ಕೆ ಬರೆಯಿರಿ.

***

Created by demo-version of Universal Document Converter. Full version doesn't add this stamp. WWW.PRINT-DRIVER.COM

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ಜಾಣ ಪರೀಕ್ಷೆ – ೨೦೧೪

**ಪ್ರಶ್ನೆಪತ್ರಿಕೆ – ೨**

## ನಾಟಕ ಮತ್ತು ಪ್ರಬಂಧ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

### ನಾಟಕ

**೧. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ.** ೩೦

ಅ. ಸೀತಾ ಪಾಣಿಗ್ರಹಣಕ್ಕಾಗಿ ರಾವಣಾದಿಗಳು ನಡೆಸುವ ತಂತ್ರೋಪಾಯಗಳನ್ನು ವಿಶ್ಲೇಷಿಸಿ.

ಆ. ಮಾನವ ಶರೀರವನ್ನು ಧರಿಸುವ ಬಗ್ಗೆ ರಾವಣನಿಗಿರುವ ಭಿನ್ನಾಭಿಪ್ರಾಯ ತಿಳಿಸಿ.

ಇ. ರಾಮ ಮತ್ತು ಅಹಲ್ಯೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

ಈ. ಸೀತಾ ಸ್ವಯಂವರಕ್ಕೆ ಒದಗುವ ವಿಘ್ನ ಮತ್ತು ನಿವಾರಣೆಯನ್ನು ಕುರಿತು ವಿಶ್ಲೇಷಿಸಿ.

ಉ. 'ಒಬ್ಬ ಕಿಚ್ಚಾದರೆ ಮತ್ತೊಬ್ಬ ಬಡಬಾಗ್ನಿ' ಈ ಹೇಳಿಕೆಯನ್ನು ವಿಶ್ವಾಮಿತ್ರ ಮತ್ತು ಪರಶುರಾಮನ ಹಿನ್ನೆಲೆಯಲ್ಲಿ ಚರ್ಚಿಸಿ.

**೨. ಯಾವುದಾದರೂ ಮೂರನ್ನು ಸಂದರ್ಭದೊಡನೆ ವಿವರಿಸಿ.** ೧೫

ಅ. ಸ್ವಯಂವರ ಶಬ್ದವು ಸ್ತ್ರೀಪುರುಷರಿಬ್ಬರಲ್ಲೂ ಅನ್ವಯಿಸುತ್ತದೆ.

ಆ. ಸಖಿ! ದುರ್ಲಭನಾದವನನ್ನು ಬರೆಯುವುದರಿಂದ ಪ್ರಯೋಜನವೇನು?

ಇ. ನಿಮಗೆಲ್ಲ ಹುಡುಗಿಯರು ನನಗೆ ಮಾತ್ರ ಮುದುಕಿಯೊ?

ಈ. ಈ ರಂಗನ ಮುಂದೆ ಯಾವ ಸಿಂಗನನ್ನು ನಿಲ್ಲಿಸುತ್ತೀಯೋ ನಿಲ್ಲಿಸು.

ಉ. ಲಂಕಾ ಪಟ್ಟಣ ಸುಟ್ಟು ಹೋದರೆ ನಮಗ್ಯಾತಕ್ಕೆ ದಕ್ಷಿಣೆ ಕೊಡುತ್ತಾರೆ?

**೩. ಯಾವುದಾದರೂ ಒಂದನ್ನು ಕುರಿತು ಟಿಪ್ಪಣಿ ಬರೆಯಿರಿ.** ೫

ಅ) ರಾಕ್ಷಸಾಲಧೀಕರಣ ಮಣಿ ಆ) ಸತ್ಯವ್ರತ ಇ) ರಾಮಾಚಾರಿ

(ಪು.ತಿ.ನೋ.)



### ಪ್ರಬಂಧ

**೪ ಇವುಗಳಲ್ಲಿ ಮೂರಕ್ಕೆ ಟಿಪ್ಪಣಿ ಬರೆಯಿರಿ.** ೧೫

ಅ) ಹೆಚ್. ನಾಗವೇಣಿ ಆ) ಆಟಿ ಅಮಾವಸ್ಯೆ

ಇ) ಪ್ಯಾರ ಈ) ಹನುಮಸ್ವಾಮಿ

**೫. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೨೦

ಅ. ಗೋಹತ್ಯೆಯ ಉಪಾಖ್ಯಾನವನ್ನು ಸಂಕ್ಷೇಪವಾಗಿ ವಿವರಿಸಿ.

ಆ. ದೆವ್ವಗಳ ಕೀಟಲೆಯನ್ನು ವಿವರಿಸಿ.

ಇ. ಹೆಣ್ಣುಮಗಳ ಪ್ರೀತಿಯ ಆಯಾಮಗಳನ್ನು ಪರಿಶೀಲಿಸಿ.

**೬. ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ.** ೧೫

ಅ. ಜೋತಿಷಿಗಳು ನವಗ್ರಹಗಳನ್ನು ಕುರಿತು ನೀಡುವ ವಿವರಣೆಗೆ ನಾಗೇಶ್ ಹೆಗಡೆಯವರು ಕೊಡುವ ವೈಚಾರಿಕ ನಿಲುವನ್ನು ಚರ್ಚಿಸಿ.

ಆ. ಬೇಟೆಯಾಡಲು ಹೋಗಿ ತಾನೇ ಬೇಟೆಯಾಗಿ ಹೋದ ಅಜ್ಜಿಸಾಬಿಯ ದುರಂತವನ್ನು ವಿವರಿಸಿ.

***

Created by demo-version of Universal Document Converter. Full version doesn't add this stamp. WWW.PRINT-DRIVER.COM

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ಜಾಣ ಪರೀಕ್ಷೆ – ೨೦೧೪

**ಪ್ರಶ್ನೆಪತ್ರಿಕೆ – ೩**

## ಕನ್ನಡ ಸಾಹಿತ್ಯ ಚರಿತ್ರೆ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

೧. 'ಕವಿರಾಜಮಾರ್ಗ'ವು ಕನ್ನಡ ಸಾಹಿತ್ಯದ ಒಂದು ಮೈಲಿಗಲ್ಲು – ವಿಚಾರಮಾಡಿ. ೧೫

ಅಥವಾ

ಕವಿ ಪಂಪ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ವಿವರಿಸಿ.

೨. ಹರಿಹರ ಯುಗವನ್ನು ಕನ್ನಡ ಸಾಹಿತ್ಯ ಬೆಳವಣಿಗೆಯಲ್ಲಿ 'ಕ್ರಾಂತಿಯುಗ' ಎಂದು ಕರೆಯಬಹುದೆ? ವಿವರಿಸಿ. ೧೫

ಅಥವಾ

ಕವಿ ರಾಘವಾಂಕನ ಕೃತಿಗಳ ವಿಶೇಷತೆಯನ್ನು ತಿಳಿಸಿ.

೩. ಪುರಂದರದಾಸ ಹಾಗೂ ಕನಕದಾಸರ ಕೊಡುಗೆ ಏನು? ೧೫

ಅಥವಾ

ವೈದಿಕ ಸಾಹಿತ್ಯ ಪರಂಪರೆಯನ್ನು ಪರಿಚಯ ಮಾಡಿಕೊಡಿ.

೪. ಮೈಸೂರು ಒಡೆಯರ ಕಾಲದ ಸಾಹಿತ್ಯ ಬೆಳವಣಿಗೆಯನ್ನು ತಿಳಿಸಿ. ೧೫

ಅಥವಾ

ಸರ್ವಜ್ಞ ಒಬ್ಬ 'ಜಂಗಮ ವಿಶ್ವಕೋಶ' ಸಮರ್ಥಿಸಿ.

೫. ಕನ್ನಡ ಸಾಹಿತ್ಯದಲ್ಲಿ ನಾಟಕ ಪ್ರಕಾರ ಬೆಳೆದು ಬಂದ ಇತಿಹಾಸವನ್ನು ಸಂಕ್ಷಿಪ್ತವಾಗಿ ಪರಿಚಯಿಸಿ. ೧೫

ಅಥವಾ

ಆಧುನಿಕ ಕನ್ನಡ ಕಾವ್ಯ ಪ್ರಕಾರವನ್ನು ಬೆಳೆಸಿದ ನಾಲ್ಕು ಕವಿಗಳನ್ನು ಪರಿಚಯಿಸಿ.

(ಪು.ತಿ.ನೋ.)

ಜಾ / ೩

೬. **ಇವುಗಳಲ್ಲಿ ಐದಕ್ಕೆ ಟಿಪ್ಪಣಿ ಬರೆಯಿರಿ.** ೨೫

೧. ವಡ್ಡಾರಾಧನೆ    ೨. ಪೊನ್ನ    ೩. ಅಕ್ಕಮಹಾದೇವಿ
೪. ಜನ್ನ    ೫. ಆಂಡಯ್ಯ    ೬. ಪ್ರಭುಲಿಂಗಲೀಲೆ
೭. ಸಂಚಿಹೊನ್ನಮ್ಮ    ೮. ಶಿವರಾಮಕಾರಂತ    ೯. ಸಣ್ಣಕತೆ
೧೦. ಕನ್ನಡದಲ್ಲಿ ವಿಮರ್ಶೆ

***

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ಜಾಣ ಪರೀಕ್ಷೆ – ೨೦೧೪

**ಪ್ರಶ್ನೆಪತ್ರಿಕೆ – ೪**

## ಹೊಸಗನ್ನಡ ವ್ಯಾಕರಣ ಮತ್ತು ಛಂದಸ್ಸು

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

### ಭಾಗ – ೧

### ಹೊಸಗನ್ನಡ ವ್ಯಾಕರಣ

**I. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** ೨೦

೧. ಹೊಸಗನ್ನಡ ವರ್ಣಮಾಲೆಯಲ್ಲಿ ವರ್ಣಗಳನ್ನು ವರ್ಗೀಕರಿಸಲಾದ ಬಗೆ ಹೇಗೆ?

೨. ಕನ್ನಡ ಸಂಧಿಗಳಲ್ಲಿ ಎಷ್ಟು ವಿಧ? ಉದಾಹರಣೆ ಸಹಿತವಾಗಿ ವಿವರಿಸಿ.

೩. ಲೇಖನ ಚಿಹ್ನೆಗಳು ಎಂದರೇನು? ಮುಖ್ಯವಾದ ಲೇಖನ ಚಿಹ್ನೆಗಳನ್ನು ತಿಳಿಸಿಕೊಡಿ.

೪. ಸಮಾಸಗಳು ಎಷ್ಟು ವಿಧ? ಯಾವುದಾದರೂ ಎರಡು ಸಮಾಸಗಳನ್ನು ವಿವರಿಸಿ.

೫. ಅವ್ಯಯಗಳಲ್ಲಿ ಎಷ್ಟು ಬಗೆ? ಸೋದಾಹರಣವಾಗಿ ತಿಳಿಸಿ.

**II.೬. ಯಾವುದಾದರೂ ನಾಲ್ಕಕ್ಕೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.** ೪

| | | | |
|---|---|---|---|
| ವರ್ಣ | ಬೊಮ್ಮ | ಭಕ್ತಿ | ಬಿತ್ತರ |
| ಸಂಸ್ಥಾ | ರತುನ | ಹರ್ಷ | ಮಿಗ |

**೭. ಮೂರನ್ನು ಬಿಡಿಸಿ ಬರೆದು ಸಂಧಿ/ಸಮಾಸದ ಹೆಸರನ್ನು ತಿಳಿಸಿ.** ೬

| | |
|---|---|
| ಸ್ತ್ರೀಯರು | ಜನೋಪಕಾರ |
| ನೀಲೋತ್ಪಲ | ಊರೂರು |

**೮. ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೨೦

| | |
|---|---|
| ಬಹುವಚನ | ವರ್ತಮಾನ ಕಾಲ |
| ಗುಣಸಂಧಿ | ನಿಷೇಧಾರ್ಥ |
| ವಿಶೇಷಣಗಳು | ಅಧ್ಯಾಹಾರ |

(ಮು.ತಿ.ನೋ.)



### ಭಾಗ – ೨

### ಛಂದಸ್ಸು

**III. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೨೦

೯. ಖ್ಯಾತ ಕರ್ನಾಟಕಗಳು ಯಾವುವು? ಯಾವುದಾದರೊಂದು ಉದಾಹರಣೆ ಸಹಿತವಾಗಿ ವಿವರಿಸಿ.

೧೦. ಸಾಂಗತ್ಯವೆಂದರೇನು? ಸಾಂಗತ್ಯದ ಲಕ್ಷಣಗಳೊಂದಿಗೆ ನಿರೂಪಿಸಿ.

೧೧. ಕಂದಪದ್ಯವನ್ನು ಸೋದಾಹರಣವಾಗಿ ವಿವರಿಸಿ.

೧೨. ಷಟ್ಪದಿಯನ್ನು ಲಕ್ಷಣಗಳ ಸಮೇತವಾಗಿ ವಿವರಿಸಿ. ಯಾವುದಾದರೊಂದು ಹಿರಿಷಟ್ಪದಿಯನ್ನು ಉದಾಹರಣೆಯೊಂದಿಗೆ ವಿವರಿಸಿ.

**IV. ಅ. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೨೦

| | |
|---|---|
| ೧೩. ಅಂಶತ್ರಿಪದಿ | ೧೪. ಲಲಿತ ರಗಳೆ |
| ೧೫. ಯತಿ | ೧೬. ಮಾತ್ರಾಗಣ |
| ೧೭. ಸಾನೆಟ್ | ೧೮. ಚಂಪಕಮಾಲೆ |

**ಆ. ಒಂದು ಪದ್ಯಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ತಿಳಿಸಿ.** ೧೦

೧೯. ಕುಳಿರ್ವ ಪೂಗೊಳಂಗಳಲ್ಲಿ
ತಳಿರ ಕಾವಣಂಗಳಲ್ಲಿ
ತುಂಬಿವಿಂಡಿನಂತೆ ಪಾಡಿ
ಜಕ್ಕವಕ್ಕಿಯಂತೆ ಕೂಡಿ

೨೦. ನಾಡು ಮನಸಿಜನೊಲವಿ
ನಾಡುವೆಡೆ ಸಂತತಂ
ಬೀಡು ರತಿಪತಿಗೆ ಸತತ ನಿಧಾನವು
ನೋಡಿದನಿಮಿಷ ಪತಿಗೆ
ಮಾಡುವುದು ವಿನಯವನು
ನಾಡಾಡಿಯವರ್ಗೆ ಬಣ್ಣಿಸಲು ಮೊಗ್ಗೇ

***

Created by demo-version of Universal Document Converter. Full version doesn't add this stamp. WWW.PRINT-DRIVER.COM